**ದಿ: 28-10-2024ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಶ್ರೀ ಬಿ.ಎಂ.ಎಂ. ವಕೀಲರಿಂದ :**

ನಾನು ಪಿ.ಯು.ಸಿ ವರೆಗೆ ಓದಿದ್ದು, ಕಳೆದ ಎಂಟು ವರ್ಷಗಳಿಂದ ಸ್ವಂತವಾಗಿ ಹೋಟೇಲ್ ಉದ್ಯಮ ಮಾಡುತ್ತಿದ್ದೇನೆ. ವಾದಿಯವರ ಪರಿಚಯ ಪುರಸಭೆ ಸದಸ್ಯರಾದ ಕಾರಣ ನಾಲ್ಕೈದು ವರ್ಷಗಳಿಂದ ಗೊತ್ತಿದ್ದಾರೆ. ಪ್ರತಿವಾದಿಯನ್ನು ಮೊದಲ ಬಾರಿಗೆ ಈಗ ನ್ಯಾಯಾಲಯದಲ್ಲಿ ನೋಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಸಂತಕಟ್ಟೆ ಫ್ಲ್ಯಾಟ್ ನಲ್ಲಿ ನೋಡಿದ್ದೇನೆ ಎನ್ನುತ್ತಾರೆ. ಉದಯಕುಮಾರ್ ಶೆಟ್ಟಿಯವರ ಕಚೇರಿ ಶೆಟ್ಟಿ ಲಂಚ್ ಹೋಂ ಪಕ್ಕದಲ್ಲಿದೆ. ಲಕ್ಷ್ಮಣ್ ಶೆಟ್ಟಿ ಎಂಬ ವಕೀಲರು ಉದಯಕುಮಾರ್ ಶೆಟ್ಟಿಯವರ ಕಚೇರಿಯಲ್ಲಿ ಇರುವುದಿಲ್ಲ. 9 ಸೆಂಟ್ಸ್ ಜಾಗದ ಬಗ್ಗೆ ಪ್ರತಿವಾದಿ ಮಾಹಿತಿ ಕೊಟ್ಟ ಮೇರೆಗೆ ನಿ.ಪಿ - 2 ತಯಾರಾಗಿದೆ. ನನ್ನ ಸಹಿ ಮುಂದಿರುವ ಬರವಣಿಗೆಯನ್ನು ನಾನು ಬರೆದಿಲ್ಲ, ನನ್ನ ಮಾಹಿತಿಯ ಮೇರೆಗೆ ವಕೀಲರ ಕಚೇರಿಯಲ್ಲಿ ಬರೆದಿದ್ದಾರೆ. ನಾನು ಸಾಕ್ಷಿಯಾಗಿ ಒಂದು ಸಹಿ ಹಾಕಿದ್ದೇನೆ, ನೋಟರಿ ವಹಿಯಲ್ಲಿ ಸಹಿ ಹಾಕಿಲ್ಲ. ದಿನಾಂಕ 25-05-2016ರಂದು ಸಹಿ ಹಾಕಿದ್ದೇನೆ. ಸುಧಾಕರ ಭಂಡಾರಿಯವರು ಸ್ವಲ್ಪ ಮಟ್ಟಿಗೆ ಪರಿಚಯವಿದೆ. ಸದರಿ ಸುಧಾಕರ ಭಂಡಾರಿ ಮತ್ತು ವಾದಿಗೆ ವೈಮನಸ್ಸು ಇರುವ ಬಗ್ಗೆ ಗೊತ್ತಿಲ್ಲ. ಲಕ್ಷ್ಮಣ್ ಶೆಟ್ಟಿ ದಿನಾಂಕ 25-05-2016ರಂದೇ ಕರಾರಿನಲ್ಲಿ ಧೃಢಿಕರಿಸಿದ ನೋಟರಿ ವಕೀಲರಾಗಿ ಸಹಿ ಹಾಕಿದ್ದಾರೆ. ಕರಾರು ಪತ್ರದಲ್ಲಿ ನಮೂದಿರುವ ಮುಂಗಡ ಹಣದ ಬಗ್ಗೆ ನನಗೆ ಮಾಹಿತಿ ಇಲ್ಲದ ಕಾರಣ ನನ್ನ ಮುಖ್ಯ ವಿಚಾರಣಾ ಪತ್ರದಲ್ಲಿ ಆ ಬಗ್ಗೆ ನಮೂದಿಸಿಲ್ಲ ಎಂದರೆ ಸರಿಯಲ್ಲ. 2016ರಲ್ಲಿ ನನಗೆ ವಾದಿಯ ಪರಿಚಯವಿರಲಿಲ್ಲ ಎಂದರೆ ಸರಿಯಲ್ಲ. ಮಾರುಕಟ್ಟೆಯ ಬೆಲೆ ದಾವಾ ಸ್ವತ್ತಿನ ಸೆಂಟ್ಸ್ ಗೆ ಎಷ್ಟು ಬೆಲೆ ಇದೆ ಎಂದರೆ ಸಾಕ್ಷಿಯು 2016ರಲ್ಲಿ ಎಂಬತ್ತು ಸಾವಿರ ಇತ್ತು, ಈಗ ಎಷ್ಟಿದೆ ಗೊತ್ತಿಲ್ಲ ಎನ್ನುತ್ತಾರೆ. ವಾದಿ ಮತ್ತು ಪ್ರತಿವಾದಿ ಮಧ್ಯೆ ಯಾವುದೇ ಕರಾರುಪತ್ರ ಆಗಿಲ್ಲ, ವಾದಿಯ ನಕಲು ಸಹಿ ಮಾಡಿ ನಿ.ಪಿ - 2ನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಪ್ರತಿವಾದಿ ನನ್ನ ಸಮಕ್ಷಮ ಯಾವುದೇ ಸಹಿ ಹಾಕಿಲ್ಲ ಮತ್ತು ಯಾವುದೇ ಹಣ ಪಡೆದಿಲ್ಲಎಂದರೆ ಸರಿಯಲ್ಲ. ನನ್ನನ್ನು ವಾದಿಯೇ ಎರಡು ಬಾರಿ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದಾರೆ ಎಂದರೆ ಸರಿ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇಲ್ಲ**.**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು**)**

**ಓ ಹೇ ಕೇ ಸ ಇ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಕುಂದಾಪುರ**